RNU AIR DHARWAD

APRIL 03, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು

<><><>

- ವಕ್ಫ್ ಬೋರ್ಡ್, ಇನ್ನು ಮುಂದೆ ಉಮ್ಮೀದ್; ವಕ್ಫ್ ತಿದ್ದುಪಡಿ ಮಸೂದೆ, ಲೋಕಸಭೆಯಲ್ಲಿ ಅಂಗೀಕಾರ.
- ಹಂಪಿ ಕನ್ನಡ ವಿಶ್ವವಿದ್ಯಾಲಯದ, ನಾಡೋಜ ಗೌರವ; ನ್ಯಾಯಮೂರ್ತಿ ಶಿವರಾಜ ಪಾಟೀಲ, ಪಂಡಿತ ಎಂ.ವೆಂಕಟೇಶಕುಮಾರ ಹಾಗೂ ಸಾಹಿತಿ ಕುಂ. ವೀರಭದ್ರಪ್ಪ, ಭಾಜನ.
- ವಿಶ್ವ ಸ್ವಲೀನತೆ, 'ಆಟಿಸಂ' ದಿನಾಚರಣೆ, ಸಂಪನ್ನ.
- ಜಲಚರ ಪ್ರಾಣಿಗಳು, ಅವುಗಳ ಆವಾಸಸ್ಥಾನ ರಕ್ಷಿಸುವ, ವಿಶ್ವ ಜಲಚರ ದಿನಾಚರಣೆ, ಇಂದು.

<><><>

ಈಗ ವಾರ್ತೆಗಳ ವಿವರ

<><><>

ವಕ್ಫ್ ತಿದ್ದುಪಡಿ ಕುರಿತು, ಜಂಟಿ ಸಂಸದೀಯ ಮಂಡಳಿಯಲ್ಲಿ ನಡೆದ ಚರ್ಚೆಗಳು ಐತಿಹಾಸಿಕ; ಸಂವಿಧಾನ ಮತ್ತು ಕಾನೂನು ತಜ್ಞರ ಸಲಹೆ ಪಡೆದು, ವಕ್ಫ್ ತಿದ್ದುಪಡಿ ಮಸೂದೆ– 2025 'ಉಮ್ಮೀದ್' ಹಾಗೂ ಮುಸಲ್ಮಾನ್ ವಕ್ಫ್ ರದ್ದು ಮಸೂದೆ – 2024 ಅನ್ನು, ಲೋಕಸಭೆಯಲ್ಲಿ ಮಂಡಿಸಲಾಗಿದೆ ಎಂದು, ಕೇಂದ್ರದ ಅಲ್ಪ ಸಂಖ್ಯಾತರ ವ್ಯವಹಾರಗಳ ಖಾತೆ ಸಚಿವ ಕಿರಣ್ ರಿಜಿಜು ಸ್ಪಷ್ಟ ಪಡಿಸಿದ್ದಾರೆ.

<><><>

ಲೋಕಸಭೆಯಲ್ಲಿ ಎರಡೂ ಮಸೂದೆಗಳು, ಅಂಗೀಕಾರಗೊಂಡಿವೆ. 288 ಸಂಸದರು ಮಸೂದೆಗಳ ಪರ ಹಾಗೂ 232 ಸಂಸದರು ವಿರೋಧ ನಿಲುವು ತಾಳಿ, ಮತ ಚಲಾಯಿಸಿದರು.

<><><>

ತಡರಾತ್ರಿ ವರೆಗಿನ, ಸುದೀರ್ಘ ಚರ್ಚೆಯಲ್ಲಿ, ಕರ್ನಾಟಕದ ವಕ್ಫ್ ಆಸ್ತಿಗಳ ಪರಭಾರೆ ವಿವಾದಗಳ ವಿಷಯವನ್ನು ಕೇಂದ್ರ ಗೃಹ ಖಾತೆ ಸಚಿವ ಅಮಿತ್ ಷಾ ಪ್ರಸ್ತಾಪಿಸಿದರು. ಮಂಡಳಿಯನ್ನು ಜಾತ್ಯತೀತಗೊಳಿಸುವುದು ಹಾಗೂ ಎಲ್ಲರೂ ಒಳಗೊಳ್ಳುವಂತೆ ಮಾಡುವುದು ಮಸೂದೆಯ ಉದ್ದೇಶ ಎಂದರು.

<><><>

ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಮಾಜಿ ಅಧ್ಯಕ್ಷ, ಅನ್ವರ್ ಮಾಣಿಪ್ಪಾಡಿ, ಹೊಸ ದಿಲ್ಲಿಯಲ್ಲಿ ಮಾತನಾಡಿ, ಇದು ಕೇಂದ್ರದಿಂದ ಐತಿಹಾಸಿಕ ನಿರ್ಣಯ, ಎಂದಿದ್ದಾರೆ.

<><><>

ಅನ್ವರ್ ಮಾಣಿಪ್ಪಾಡಿ ಧ್ವನಿ (ಇಂಗ್ಲಿಷ್) 15 ಸೆಕೆಂದುಗಳು

<><><>

ದೇಶದ 81 ಕೋಟಿಗೂ ಹೆಚ್ಚು ಜನರಿಗೆ, ಪ್ರತಿ ತಿಂಗಳು ಉಚಿತ ಆಹಾರ ಧಾನ್ಯವನ್ನು ಕೇಂದ್ರ ವಿತರಿಸುತ್ತಿದೆ; ಇದಕ್ಕಾಗಿ 2 ಲಕ್ಷ 11 ಸಾವಿರ ಕೋಟಿ ರೂಪಾಯಿ ವೆಚ್ಚ ಮಾಡಲಾಗುತ್ತಿದೆ ಎಂದು, ಕೇಂದ್ರ ಆಹಾರ ಮತ್ತು ಸಾರ್ವಜನಿಕ ವಿತರಣೆ ಖಾತೆ ಸಚಿವ ಪ್ರಲ್ಹಾದ ಜೋಶಿ, ಲೋಕಸಭೆಗೆ ತಿಳಿಸಿದ್ದಾರೆ. ಧಾನ್ಯಗಳ ಖರೀದಿ, ರಾಜ್ಯಗಳ ಗೋದಾಮುಗಳಿಗೆ ಪೂರೈಕೆ, ಅಂತಾರಾಜ್ಯ ಸರಬರಾಜು ಕಾರ್ಯಗಳನ್ನು ಕೇಂದ್ರ ನಿಭಾಯಿಸುತ್ತಿದೆ ಎಂದು, ಅವರು ಹೇಳಿದರು.

<><><>

ರಾಜ್ಯದ ಗ್ರಾಮ ಪಂಚಾಯಿತಿಗಳ ನೌಕರರಿಗೆ, ಆರೋಗ್ಯ ವಿಮೆ ಸೌಲಭ್ಯವನ್ನು ನೀಡುವಂತೆ, ಕೇಂದ್ರ ಕಾರ್ಮಿಕ ಖಾತೆ ಸಚಿವ ಮನ್ಸುಖ್ ಮಾಂಡವೀಯ ಅವರಿಗೆ, ಉಡುಪಿ–ಚಿಕ್ಕಮಗಳೂರು ಸಂಸದ ಕೋಟಾ ಶ್ರೀನಿವಾಸ ಪೂಜಾರಿ, ಮನವಿ ಸಲ್ಲಿಸಿದ್ದಾರೆ. ದೇಶದಲ್ಲಿ 2 ಲಕ್ಷದ 55 ಸಾವಿರ ಹಾಗೂ ರಾಜ್ಯದಲ್ಲಿ 5 ಸಾವಿರದ 9 ನೂರಾ 95 ಗ್ರಾಮ ಪಂಚಾಯಿತಿಗಳು ಕಾರ್ಯನಿರ್ವಹಿಸುತ್ತಿವೆ. 16 ಲಕ್ಷದ 77 ಸಾವಿರ ಪಂಚಾಯಿತಿ ಸಿಬ್ಬಂದಿಗೆ, ಮಾನವೀಯ ನೆಲೆಯಲ್ಲಿ, ಆರೋಗ್ಯ ವಿಮೆ ಸೌಲಭ್ಯ ಒದಗಿಸುವಂತೆ ಕೋರಿದ್ದಾಗಿ, ತಿಳಿಸಿದ್ದಾರೆ.

<><><>

'ನರ ವೈವಿಧ್ಯತೆ ಸುದೃಢತೆ ಹಾಗೂ ವಿಶ್ವ ಸಂಸ್ಥೆಯ ಅಭಿವೃದ್ಧಿ ಗುರಿ ಸಾಧನೆಯತ್ತ ಹೆಜ್ಜೆ' ಧ್ಯೇಯದೊಂದಿಗೆ, ವಿಶ್ವ ಸ್ವಲೀನತೆ 'ಆಟಿಸಂ' ದಿನಾಚರಣೆ, ಜರುಗಿತು. ವಿಶೇಷ ಅಗತ್ಯವುಳ್ಳ ಮಕ್ಕಳ ಪಾಲಕರೊಂದಿಗೆ, ಬೀದರ್‌ನ ಉಟಗೇ ಆಸ್ಪತ್ರೆಯಲ್ಲಿ, ಜಿಲ್ಲೆಯ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ, ಸಂವಾದ ನಡೆಸಿದರು. ಬೀದರ್ ಜಿಲ್ಲೆಯಲ್ಲಿ, 'ಆಟಿಸಂ' ಮಕ್ಕಳಿಗೆ, ಉತ್ತಮ ತರಬೇತಿ, ಚಿಕಿತ್ಸೆ, ಆರೈಕೆ ಹಾಗೂ ಆರೋಗ್ಯ ಸೌಲಭ್ಯ ಒದಗಿಸಲು, ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ – 'ಬ್ರಿಮ್ಸ್' ಆಸ್ಪತ್ರೆಯಲ್ಲಿ, ವಿಶೇ ' ಆಟಿಸಂ ಚಿಕಿತ್ಸಾ ವಿಭಾಗ ಸ್ಥಾಪಿಸಲು ಸೂಚಿಸಲಾಗಿದೆ ಎಂದರು.ಬೀದರನಲ್ಲಿ, 'ಆಟಿಸಂ' ಮಕ್ಕಳಿಗೆ ಉತ್ತಮ ಚಿಕಿತ್ಸೆ ಒದಗಿಸುತ್ತಿರುವ ಡಾಕ್ಟರ್ ಪ್ರಶಾಂತ ಉಟಗೇ ಅವರ ಶ್ರಮ ಶ್ಲಾಘನೀಯ ಎಂದು ಸಚಿವರು ಹೇಳಿದರು.

<><><>

ಸರ್ವೋಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ಶಿವರಾಜ ಪಾಟೀಲ, ಖ್ಯಾತ ಹಿಂದೂಸ್ಥಾನಿ ಗಾಯಕ, ಪಂಡಿತ ಎಂ. ವೆಂಕಟೇಶಕುಮಾರ ಹಾಗೂ ಸಾಹಿತಿ ಕುಂ. ವೀರಭದ್ರಪ್ಪ, ಹಂಪಿ ಕನ್ನಡ ವಿಶ್ವವಿದ್ಯಾಲಯದ, ನಾಡೋಜ ಗೌರವಕ್ಕೆ ಭಾಜನರಾಗಿದ್ದಾರೆ. ಉಪ ಕುಲಪತಿ ಡಿ.ವಿ. ಪರಮಶಿವಮೂರ್ತಿ, ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

<><><>

ವಿಜಯನಗರ ಜಿಲ್ಲೆಯ, ಹಂಪಿ ಕನ್ನಡ ವಿಶ್ವವಿದ್ಯಾಲಯದ, 33ನೇ ಘಟಿಕೋತ್ಸವ, 'ನುಡಿ ಹಬ್ಬ', ನಾಳೆ ಸಂಜೆ, 6.30ಕ್ಕೆ, ವಿಶ್ವವಿದ್ಯಾಲಯದ ನವರಂಗ ಬಯಲು ರಂಗ ಮಂದಿರದಲ್ಲಿ ಜರುಗಲಿದ್ದು, ಕುಲಾಧಿಪತಿ ಥಾವರಚಂದ್ ಗೆಹ್ಲೋಟ್ ಪುರಸ್ಕಾರ ಹಾಗೂ ಪದವಿಗಳನ್ನು ಪ್ರದಾನಿಸಲಿದ್ದಾರೆ, ಎಂದರು.

<><><>

198 ಜನ ಸಂಶೋಧಕರು, ಪಿ.ಎಚ್.ಡಿ ಹಾಗೂ ಏಳು ಜನ ಡಿ.ಲಿಟ್ ಪದವಿ ಪಡೆಯಲಿದ್ದಾರೆ.

<><><>

ನಾಡೋಜ ಗೌರವಕ್ಕೆ ಭಾಜನರಾದ, ಪದ್ಮಶ್ರೀ ಪಂಡಿತ ಎಂ. ವೆಂಕಟೇಶ ಕುಮಾರ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಪಂ. ಎಂ. ವೆಂಕಟೇಶಕುಮಾರ ಧ್ವನಿ 40 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ದಕ್ಷಿಣಕನ್ನಡ ಜಿಲ್ಲೆ, ಸುಳ್ಯದ ಕೋಲ್ಚಾರು ಗ್ರಾಮದ, ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯ. ಸಹ ಶಿಕ್ಷಕಿ ಕೆ.ಡಿ. ಜಲಜಾಕ್ಷಿ ಅವರು, ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸಹಕಾರದಲ್ಲಿ, ಸ್ವತಃ ಅಕ್ಷರ ವಾಹಿನಿ ಚಾಲಕಿಯಾಗಿ, ಮಕ್ಕಳ ಕಲಿಕೆಗೆ ಆಸರೆಯಾಗಿದ್ದಾರೆ. ಆನೆಗಳ ಹಾವಳಿ, ಕಾಡಂಚಿನ ಗ್ರಾಮದ ಶಾಲೆ ಹಾಗೂ ಬಸ್ ಸೌಕರ್ಯವಿಲ್ಲದ ಕಾರಣ, ಪುಟ್ಟ ಮಕ್ಕಳನ್ನು ನಿತ್ಯ ಹನ್ನೆರಡು ಕಿಲೋ ಮೀಟರ್ ವ್ಯಾನ್‌ನಲ್ಲಿ ಅವರು ಶಾಲೆಗೆ ಕರೆ ತರುತ್ತಾರೆ. ನಿತ್ಯ ಪಾಠ ಮುಗಿಸಿ, ಮರಳಿ ತಾವೇ ಕರೆದೊಯ್ದು ಮಕ್ಕಳನ್ನು ಮನೆ ತಲುಪಿಸುತ್ತಾರೆ. ಎಸ್.ಡಿ.ಎಂ.ಸಿ.ಯ ಸಹಕಾರದ ನಡೆ, ಟೀಚರ್ ಜಲಜಾಕ್ಷಿ ಅವರ ಕಾಳಜಿ, ಮಾದರಿಯಾಗಿದೆ. ಪ್ರದೇಶ ಸಮಾಚಾರಕ್ಕಾಗಿ ಅವರು ತಮ್ಮ ಅನುಭವ ಹಂಚಿಕೊಂಡಿದ್ದಾರೆ.

<><><>

ಕೆ.ಡಿ. ಜಲಜಾಕ್ಷಿ ಧ್ವನಿ 60 ಸೆಕೆಂದುಗಳು

<><><>

ಸರ್ಕಾರಿ ಶಾಲೆ ಮತ್ತು ಬುದ್ಧ, ಬಸವ ಹಾಗೂ ಅಂಬೇಡ್ಕರ್ ಭವನ ನಿರ್ಮಾಣಕ್ಕಾಗಿ, ಕೊಪ್ಪಳದ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ, ಕುಕನೂರು ಸಮೀಪದ ಭಾನಾಪೂರ ಗ್ರಾಮದಲ್ಲಿರುವ, ಗವಿಮಠದ ಭೂಮಿಯನ್ನು, ದಾನವಾಗಿ ನೀಡಿ, ಸರ್ಕಾರದ ಹೆಸರಲ್ಲಿ ನೋಂದಣಿ ಮಾಡಿಸಿದ್ದಾರೆ. ಭಾನಾಪೂರ ಗ್ರಾಮದ ಗವಿಮಠಕ್ಕೆ ಸೇರಿದ, 2 ಎಕರೆ 6 ಗುಂಟೆ ಜಾಗೆಯನ್ನು, ಸರ್ಕಾರಿ ಪ್ರೌಢ ಶಾಲೆಗೆ ಹಾಗೂ ಭವನ ನಿರ್ಮಾಣಕ್ಕೆ, 27 ಗುಂಟೆ ಭೂಮಿಯನ್ನು ದಾನವಾಗಿ ನೀಡಿದ್ದಾರೆ.

<><><>

ಭಾನಾಪೂರ ಗ್ರಾಮಸ್ಥ ಚಂದ್ರಶೇಖರಯ್ಯ ಹಿರೇಮಠ ಮಾತನಾಡಿ, ಸುಮಾರು 3 ಎಕರೆಯ ್ಟ ಭೂಮಿಯನ್ನು ಗವಿಶ್ರೀಗಳು ದಾನವಾಗಿ ನೀಡಿದ್ದಾರೆ. ಶ್ರೀಗಳ ಈ ಅಮೋಘ ಕಾರ್ಯಕ್ಕೆ ಬೆಲೆ ಕಟ್ಟಲಾಗದು' ಎಂದರು.

<><><>

ಜಲಚರ ಪ್ರಾಣಿಗಳು ಹಾಗೂ ಅವುಗಳ ಆವಾಸಸ್ಥಾನಗಳನ್ನು ರಕ್ಷಿಸುವ, ಮತ್ತು ಸಂರಕ್ಷಿಸುವ ಮಹತ್ವದ ಬಗ್ಗೆ, ಜನ ಜಾಗೃತಿ ಮೂಡಿಸಲು, ಇಂದು ವಿಶ್ವ ಜಲಚರ ದಿನ ಆಚರಿಸಲಾಗುತ್ತಿದೆ. ಜೌಗುನೆಲ, ಜಲಚರ, ಉಭಯಚರಗಳು ಮತ್ತು ಅವುಗಳ ಪಾರಿಸಾರಿಕ ವ್ಯವಸ್ಥೆಯ ಮಹತ್ವವನ್ನು ಎತ್ತಿ ತೋರಿಸಿ, ಅವು ಎದುರಿಸುತ್ತಿರುವ ಸವಾಲುಗಳನ್ನು ಪರಿಹರಿಸುವ ಕ್ರಮಗಳನ್ನು ಪ್ರೋತ್ಸಾಹಿಸುವ ಗುರಿಯನ್ನು ಈ ದಿನ ಹೊಂದಿದೆ.

<><><>

ಐ.ಪಿ.ಎಲ್. ಇಂಡಿಯನ್ ಪ್ರೀಮಿಯರ್ ಲೀಗ್ ಟಿ–ಟ್ವೆಂಟಿ ಕ್ರಿಕೆಟ್ ಸರಣಿಯ, ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ, ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿರುದ್ಧ, ಗುಜರಾತ್ ಟೈಟನ್ಸ್ ತಂಡ, ಎಂಟು ವಿಕೆಟ್‌ಗಳ ಜಯ ಸಾಧಿಸಿತು. ಮೊದಲು ಬ್ಯಾಟಿಂಗ್ ಮಾಡಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ, ನಿಗದಿತ 20 ಓವರ್‌ಗಳಲ್ಲಿ, 8 ವಿಕೆಟ್ ನಷ್ಟಕ್ಕೆ 169 ರನ್‌ಗಳನ್ನು ಗಳಿಸಿತು. ಗುಜರಾತ್ ಟೈಟನ್ಸ್ ತಂಡ 17 ದಶಾಂಶ 5 ಓವರ್‌ಗಳಲ್ಲಿ, 2 ವಿಕೆಟ್ ಕಳೆದುಕೊಂಡು 170 ರನ್‌ಗಳನ್ನು ಗಳಿಸಿ, ಗೆಲುವಿನ ನಗೆ ಬೀರಿತು.

<><><>

ಬೇಸಿಗೆ ಪ್ರಖರತೆ ಹಿನ್ನೆಲೆ, ಕಲ್ಯಾಣ ಕರ್ನಾಟಕದ ಏಳು ಮತ್ತು ಮುಂಬೈ ಕರ್ನಾಟಕದ ಎರಡು ಸೇರಿ, ಒಂಬತ್ತು ಜಿಲ್ಲೆಗಳಲ್ಲಿ ಮುಂದಿನ ಎರಡು ತಿಂಗಳ ಕಾಲ, ಸರ್ಕಾರಿ ಕಚೇರಿಗಳ, ಕಾರ್ಯನಿರ್ವಹಣೆ ವೇಳೆ ಬದಲಿಸಿ, ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ನೇಯ್ಗೆಯಲ್ಲೇ ದೇವರನ್ನು ಕಂಡ, ಶ್ರೀ ದೇವರ ದಾಸೀಮಯ್ಯನವರ ಜಯಂತಿಯನ್ನು, ನಾಡಿನಾದ್ಯಂತ ಶ್ರದ್ಧಾ, ಭಕ್ತಿಯಿಂದ ಆಚರಿಸಲಾಯಿತು.

<><><>

ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ, ಬಿಜೆಪಿ ನಾಯಕರು, ಬೆಂಗಳೂರಿನ ಫ್ರೀಡಂ ಪಾರ್ಕ್ ಬಳಿ, ಅಹೋರಾತ್ರಿ ಧರಣಿ ನಡೆಸುತ್ತಿದ್ದಾರೆ.

<><><>

ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ, ದಿವಂಗತ ಬಿ.ಎನ್. ಕೃಷ್ಣನ್ ಅವರ ಸ್ಮೃತಿಗೆ, ಇಂದು ಮಧ್ಯಾಹ್ನ 3.45ಕ್ಕೆ, ಬೆಂಗಳೂರಿನ ಉಚ್ಚ ನ್ಯಾಯಾಲಯದ, 1ನೇ ಸಭಾಂಗಣದಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಗುತ್ತಿದೆ.

<><><>

ಕುವೆಂಪು ಭಾ ಾ ಭಾರತಿ ಪ್ರಾಧಿಕಾರ, ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ಪ್ರಯುಕ್ತ, ಈ ತಿಂಗಳ 30ರ ವರೆಗೆ, ಶೇಕಡ 50ರ ರಿಯಾಯಿತಿಯಲ್ಲಿ, ತನ್ನ ಪ್ರಕಟಣೆಗಳನ್ನು ಮಾರಾಟ ಮಾಡಲಿದೆ.

<><><>

ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್, ಇ–ಬ್ಯಾಂಕ್ ಗ್ಯಾರಂಟಿ (ಇ–ಬಿಜಿ) ಸೇವೆಯನ್ನು ಪ್ರಾರಂಭಿಸಿದ, ದೇಶದ ಮೊದಲ ಗ್ರಾಮೀಣ ಬ್ಯಾಂಕ್ ಎಂಬ, ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು, ಬ್ಯಾಂಕಿನ ಅಧ್ಯಕ್ಷ ಶ್ರೀಕಾಂತ ಭಂಡಿವಾಡ ತಿಳಿಸಿದ್ದಾರೆ.

<><><>

ರಾಜ್ಯ ಮಾನವ ಹಕ್ಕುಗಳ ಆಯೋಗ, ನಾಳೆ ರಾಮನಗರ ಜಿಲ್ಲೆಯಲ್ಲಿ, ಸಾರ್ವಜನಿಕರ ಅಹವಾಲು ಆಲಿಕೆ ಸಭೆ ನಡೆಸಲಿದೆ. (02)

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ವಕ್ಫ್ ಬೋರ್ಡ್, ಇನ್ನು ಮುಂದೆ ಉಮ್ಮೀದ್; ವಕ್ಫ್ ತಿದ್ದುಪಡಿ ಮಸೂದೆ, ಲೋಕಸಭೆಯಲ್ಲಿ ಅಂಗೀಕಾರ.
- ಹಂಪಿ ಕನ್ನಡ ವಿಶ್ವವಿದ್ಯಾಲಯದ, ನಾಡೋಜ ಗೌರವ; ನ್ಯಾಯಮೂರ್ತಿ ಶಿವರಾಜ ಪಾಟೀಲ, ಪಂಡಿತ ಎಂ.ವೆಂಕಟೇಶಕುಮಾರ ಹಾಗೂ ಸಾಹಿತಿ ಕುಂ. ವೀರಭದ್ರಪ್ಪ, ಭಾಜನ.
- ವಿಶ್ವ ಸ್ವಲೀನತೆ, 'ಆಟಿಸಂ' ದಿನಾಚರಣೆ, ಸಂಪನ್ನ.
- ಜಲಚರ ಪ್ರಾಣಿಗಳು, ಅವುಗಳ ಆವಾಸಸ್ಥಾನ ರಕ್ಷಿಸುವ, ವಿಶ್ವ ಜಲಚರ ದಿನಾಚರಣೆ, ಇಂದು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>